# ಅವಳಿ ಸಹೋದರಿ ಆರ್ಕಿಡ್!



**ಯುಗಾದಿಗೆಂದು ಮನೆಯ ಮುಂದೆ ಮಾವಿನ ತೋರಣ ಕಟ್ಟಲು ಮಾವಿನ ಮರಕ್ಕೆ ಲಗ್ಗೆ ಇಟ್ಟರೆ ಈ ಆರ್ಕಿಡ್ ದರ್ಶನವಾಗುತ್ತದೆ.**

ಚಿತ್ರ– ಬರಹ:
**ಪುಟ್ಟರಾಜು, ಕೈಗಾ**

**ಚೈ**ತ್ರ ಮಾಸದಲ್ಲಿ ಅರಳುವ 'ಅವಳಿ ಸಹೋದರಿ' ಆರ್ಕಿಡ್ ಯುಗಾದಿ ಹಬ್ಬಕ್ಕೆ ವಸಂತ ಋತುವಿನ ಕೊಡುಗೆ! –ಡೆಂಡ್ರೊಬಿಯಮ್ ಲಾಯಿಯನುಮ್ (**Dendrobium lawianum**) ಇದರ ವೈಜ್ಞಾನಿಕ ಹೆಸರು. ಚೈತ್ರದ ಕೋಗಿಲೆಯ ಕಲರವಕ್ಕೆ ಯುಗಳಗೀತೆ ಹಾಡುತ್ತಾ ಅರಳುವ ಈ ಅವಳಿ ಸಹೋದರಿಯರು, ಒಬ್ಬರನ್ನೊಬ್ಬರು ಬಿಟ್ಟಿರಲಾರೆಂಬಂತೆ ಜೋಡಿಯಾಗಿಯೇ ಅರಳುತ್ತಾರೆ.

ಈ ಪ್ರಭೇದವನ್ನು ಅಂತರರಾಷ್ಟ್ರೀಯ ಸಂಸ್ಥೆಯಾದ **IUCN** ನವರು 'ಎಂಡೆಮಿಕ್ ಟು ವೆಸ್ಟರ್ನ್ ಘಾಟ್ಸ್' (**Endemic to Western Ghats**) ಎಂದು ಪಟ್ಟಿ ಮಾಡಿದ್ದಾರೆ. ಇದು ಪಶ್ಚಿಮ ಘಟ್ಟಕ್ಕೆ ಸೀಮಿತವಾದುದು ಎನ್ನುವುದರಿಂದಲೇ ಇದರ ಸಂರಕ್ಷಣೆಯ ಪ್ರಾಮುಖ್ಯತೆ ಅರಿವಾಗುತ್ತದೆ.

ಇಂತಹ ಆರ್ಕಿಡ್, ಕಾಳಿ ಕಣಿವೆಯಲ್ಲಿರುವ ಕಾಳಿ ಹುಲಿ ಸಂರಕ್ಷಿತ ಪ್ರದೇಶವಾದ ಅನಶಿ ರಾಷ್ಟ್ರೀಯ ಉದ್ಯಾನದಲ್ಲಿ ಅರಳುತ್ತಿದೆ. ಈ ಸಸ್ಯವನ್ನು ಸಸ್ಯಶಾಸ್ತ್ರಜ್ಞ ಡಾ.ಜಾನ್ ಲಿಂಡ್ಲೆ ನಾಮಕರಣ ಮಾಡಿದ್ದಾರೆ. ಹೆಮ್ಮೆಯ ಸಂಗತಿಯೆಂದರೆ ಇದನ್ನು ಉತ್ತರ ಕನ್ನಡದ ಕ್ಯಾಸಲ್ ರಾಕ್ ಪ್ರದೇಶದಿಂದ

(8ನೇ ಪುಟ ನೋಡಿ)